ವಾರದ ಪತ್ರ

## ನಡುಹಗಲೂ ರಾತ್ರಿ ಆಯಿತು

ಕಳೆದ ಡಿಸೆಂಬರ್ 31ರ ರಾತ್ರಿ ಬಹುತೇಕ ಚಾನೆಲ್‌ಗಳು 2023ನ್ನು ಸ್ವಾಗತಿಸುವ ಸಂದರ್ಭವನ್ನು ನೇರ ಪ್ರಸಾರ ಮಾಡುತ್ತಿದ್ದವು. ಬೆಂಗಳೂರಿನ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್ ಹಾಗೂ ಮಂಗಳೂರು, ಹುಬ್ಬಳ್ಳಿ ನಗರಗಳಲ್ಲಿ ಕುಣಿದು ಕುಪ್ಪಳಿಸುವ ದೃಶ್ಯಗಳೇ ಅದರಲ್ಲಿ ಹೆಚ್ಚಿತ್ತು.

ಪವರ್ ಟೀವಿಯಲ್ಲಿ ರಾತ್ರಿ ಹತ್ತರ ವೇಳೆಗೆ ನ್ಯೂಯಾರ್ಕ್, ಅಮೆರಿಕದಲ್ಲಿ ಹೊಸ ವರ್ಷವನ್ನು ಸ್ವಾಗತಿಸಿದ ಪರಿಯನ್ನು ನೋಡೋಣ ಬನ್ನಿ ಎನ್ನುತ್ತಾ ಝಗಮಗಿಸುವ ದೀಪ, ಪಟಾಕಿ ಸಿಡಿಸುವುದನ್ನು ಪ್ರಸಾರ ಮಾಡಿದರು. ನ್ಯೂಯಾರ್ಕ್‌ನಲ್ಲಿ ಆಗಿನ್ನೂ ಡಿಸೆಂಬರ್ 31ರ ಹಗಲು. ಡಿಸೆಂಬರ್ 31ರ ರಾತ್ರಿ ಎಲ್ಲರೂ ಮೈಮರೆತಿರುತ್ತಾರೆ ಎನ್ನುವ ಅಭಿಪ್ರಾಯ ಚಾನಲಿನವರದೇ?

—ಜಯಪ್ರಕಾಶ ತಲವಾಟ, ಸಾಗರ

## ಭುವಿಯ ದಡ್ಡತನಕ್ಕೆ ಕೊನೆಯಿಲ್ಲವೆ...

ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ಸಾನಿಯಾ ಮತ್ತು ವರೂಧಿನಿ ಏನೆಲ್ಲ ಕುತಂತ್ರ ಮಾಡುತ್ತಿದ್ದಾರೆ. ಇದು ಹಲವು ಬಾರಿ ಭುವಿಯ ಅರಿವಿಗೆ ಬಂದಿದ್ದರೂ ಅವರ ಬಗ್ಗೆ ಮಾತ್ರ ಅನುಮಾನ ಪಡಬೇಡಿ ಎಂದು ಹರ್ಷನಿಗೆ ಹೇಳುತ್ತಾಳೆ. ಆಕೆ ಆಗಾಗ ವರೂಧಿನಿ ಪರವಾಗಿಯೇ ಮಾತನಾಡುವುದು ಆಶ್ಚರ್ಯ ಅನಿಸುತ್ತದೆ. ಅಂಗರಕ್ಷಕರು, ಸೇವಕರು ಇದ್ದರೂ ಮನೆಯವರಿಗೆ ಹೇಳದೆ, ತನಗೆ ಸ್ವಲ್ಪ ಕೆಲಸವಿದೆ ಎಂದು ಹೇಳಿ ಆಟೊದಲ್ಲಿ ಹೋಗುವುದು ಅಸಹಜ. ಈ ಧಾರಾವಾಹಿ ಯಾವಾಗ ಮುಗಿದೀತೋ ಎನಿಸತೊಡಗಿದೆ.

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ಜಾನಕಿಗೆ ನ್ಯಾಯ ಸಿಗಬೇಕಿತ್ತು

ಒಂದು ಸಿನಿಮಾ ಯಶಸ್ವಿ ಆದರೆ ಅದರ ಸೂತ್ರವನ್ನು ಬಳಸಿ ಎರಡನೇ ಭಾಗ ಮಾಡುವ ಟ್ರೆಂಡ್ ಇದೆ. ಇದು ನಿಧಾನವಾಗಿ ಕಿರುತೆರೆಯಲ್ಲೂ ಕಾಣಿಸುತ್ತಿದೆ. ದಶಕಗಳ ಹಿಂದೆ ಟೀವಿ ವೀಕ್ಷಕರ ಮನಸೆಳೆದ 'ಮಾಯಾಮೃಗ'ವನ್ನು 'ಮತ್ತೆ ಮಾಯಾಮೃಗ'ದಲ್ಲಿ ಮುಂದುವರಿಸುತ್ತಿದ್ದಾರೆ. ಆದರೆ, ಅಪಾರ ನಿರೀಕ್ಷೆಯನ್ನು ಹುಟ್ಟಿಸಿದ್ದ ಎರಡನೇ ಭಾಗ ಮೊದಲಿನ ಭಾಗದಷ್ಟು ಸಂಚಲನವನ್ನು ಉಂಟುಮಾಡಿಲ್ಲ. ಇದರ ಬದಲು ಟಿ.ಎನ್. ಸೀತಾರಾಮ್ ಅವರು ಅರ್ಧಕ್ಕೆ ನಿಂತ 'ಮಗಳು ಜಾನಕಿ'ಗೆ ತಾರ್ಕಿಕ ಅಂತ್ಯ ಕಾಣಿಸಬಹುದಿತ್ತು.

—ರಮಾನಂದ ಶರ್ಮಾ, ಬೆಂಗಳೂರು

## ಚಂದನದಲ್ಲಿ ಚಂದದ ಪಾಠ

'ಚಂದನ' ವಾಹಿನಿಯಲ್ಲಿನ ಶಿಕ್ಷಣ ತಜ್ಞೆ ವಿಜಯ ಕುಮಾರಿ ಅವರ ಸಂದರ್ಶನ ಪ್ರಯೋಜನಕಾರಿಯಾಗಿತ್ತು. ಮಕ್ಕಳು 21ನೇ ಶತಮಾನಕ್ಕೆ ಹೇಗೆ ಸಿದ್ಧವಾಗಬೇಕು ಎಂಬುದನ್ನು ವಿವರಿಸಿದರು. ಬರಿಯ ಗಿಳಿಪಾಠ ಮುಖ್ಯವಲ್ಲ. ಕ್ರಿಯಾತ್ಮಕ ಬೆಳವಣಿಗೆ, ಸೃಜನಾತ್ಮಕ ಕೌಶಲ್ಯ ಮಕ್ಕಳಲ್ಲಿ ವೃದ್ಧಿಗೊಳ್ಳಬೇಕು. ಶಾಲಾ ಕಲಿಕೆ ಎಷ್ಟು ಮುಖ್ಯವೋ ಸಾಮಾಜಿಕ ಹೊಂದಾಣಿಕೆ ಅಷ್ಟೇ ಮುಖ್ಯ. ಮಕ್ಕಳು, ವಿಶೇಷವಾಗಿ ಹೆಣ್ಣು ಮಕ್ಕಳು ದೇಹ ಆರೋಗ್ಯ ಕಾಪಾಡಿಕೊಳ್ಳಬೇಕು. ಈ ಶತಮಾನದಲ್ಲಿ ಜ್ಞಾನಾರ್ಜನೆ ಸ್ಫೋಟದ ವೇಗದಲ್ಲಿ ನಡೆಯಬೇಕು. ಗಳಿಸುವ ಅಂಕಗಳ ಜೊತೆಗೆ ಕೌಶಲ್ಯಗಳ ಸಂಪಾದನೆ ಅತಿ ಮುಖ್ಯ. ಇಂತಹ ಉಪಯುಕ್ತ ಮಾಹಿತಿ ನೀಡಿದ ಚಂದನಕ್ಕೆ ಧನ್ಯವಾದಗಳು.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಸಭ್ಯತೆ ಇಲ್ಲದ ರಿಯಾಲಿಟಿ ಶೋ

ವಾರಾಂತ್ಯದಲ್ಲಿ ಪೈಪೋಟಿಗೆ ಬಿದ್ದಂತೆ ರಿಯಾಲಿಟಿ ಶೋಗಳು ಪ್ರಸಾರವಾಗುತ್ತವೆ. ಸಾಮಾಜಿಕ–ನೈತಿಕ ಮೌಲ್ಯಗಳನ್ನು ಗಾಳಿಗೆ ತೂರಿ ದ್ವಂದ್ವಾರ್ಥ ಪದಗಳು, ಅಶ್ಲೀಲ ಹಾವಭಾವ ಪ್ರದರ್ಶಿಸುವುದೇ ರಿಯಾಲಿಟಿ ಅಂದುಕೊಂಡು ಅದನ್ನೇ ಮೆರೆಸುತ್ತಿದ್ದಾರೆ. ಇದೆಲ್ಲ ತೀವ್ರ ಬೇಸರ ತರುತ್ತಿವೆ. ಗಂಡ ಹೆಂಡತಿ ನಡುವಿನ ಖಾಸಗಿ ಕ್ಷಣಗಳನ್ನು 'ಟಾಸ್ಕ್' ಎಂದು ಮಕ್ಕಳ ನಡುವೆ ಸ್ಪರ್ಧೆಗಳನ್ನು ಕುಣಿಸಿ ನಗುವುದರಲ್ಲಿ ಏನಾದರೂ ಕಲೆ ಅಥವಾ ಪ್ರತಿಭೆ ಇದೆಯೇ?

—ಆರ್. ವೀರೇಶ್ ಕುಮಾರ್, ಬೆಂಗಳೂರು



## ಪ್ರತಾಪ್‌ರ 'ಕುರಿ' ಪಾಡು ನೋಡಿದಿರಾ...

ಶ್ವೇತಾ ಚೆಂಗಪ್ಪ ನಿರೂಪಿಸುತ್ತಿರುವ ಝೀ ಕನ್ನಡದ 'ಸೂಪರ್ ಕ್ವೀನ್' ಕಾರ್ಯಕ್ರಮದಲ್ಲಿ ಸಹನಿರೂಪಕ ಕುರಿ ಪ್ರತಾಪ್ ಪಕ್ಕದಲ್ಲಿ ದೃಷ್ಟಿ ಗೊಂಬೆಯಂತೆ ನಿಂತಿರುತ್ತಾರೆ. ತಮ್ಮ ಪಾಡಿಗೆ ತಾವು ಹಾವಭಾವವನ್ನು ಪ್ರಕಟಿಸಿ ಮೂಕಪ್ರೇಕ್ಷಕನಂತೆ ನಿಲ್ಲುವ ಕುರಿ ಅವರಿಗೆ ಬಾಯಿಬಿಡುವ ಅವಕಾಶವೇ ಇಲ್ಲ. ಇದನ್ನು ಕುರಿ ಪ್ರತಾಪ್ ಒಮ್ಮೆ ನಾಟಕೀಯವಾಗಿ ಬಹಿರಂಗ ಪಡಿಸಿದರು. ಪೌರಾಣಿಕ ಸುತ್ತಿನಲ್ಲಿ ಮೂರು ವರಗಳನ್ನು ಕೇಳುವಂತೆ ದೇವಿ ಅವಕಾಶ ನೀಡಿದಾಗ, 'ಅಮ್ಮಾ, ಇಲ್ಲಿ ನನಗೆ ಒಂದೇ ಒಂದು ಡೈಲಾಗ್ ಇಲ್ಲದಿದ್ದರೂ ನನ್ನ ಪೇಮೆಂಟ್ ಅಕೌಂಟಿಗೆ ಬಂದು ಬೀಳುವಂತೆ ಮಾಡು' ಎಂದು ಪ್ರಾರ್ಥಿಸಿದರು. ಈ ಮೂಲಕ ತಮ್ಮ ಮೂಕರೋದನವನ್ನು ಅವರು ತೆರೆದಿಟ್ಟರು. 'ಪಾರು' ಧಾರಾವಾಹಿಯಲ್ಲಿ ತಾರಾ ಹೋಟೆಲಿನ ಸ್ವಾಗತಕಾರನ ಸಮವಸ್ತ್ರ ಧರಿಸಿ ಬೆದರುಗೊಂಬೆಯಂತೆ ನಿಲ್ಲುವ ಚೆನ್ನಪ್ಪನ ಪಾತ್ರಕ್ಕೂ ಕುರಿಯ ಪಾತ್ರಕ್ಕೂ ಏನೇನೂ ವ್ಯತ್ಯಾಸವಿಲ್ಲ.

—ವಾ. ಮುರಳೀಧರ, ತೀರ್ಥಹಳ್ಳಿ

## ಗೆದ್ದೆತ್ತಿನ ಬಾಲ ಹಿಡಿದು...

ಕನ್ನಡ ಸುದ್ದಿವಾಹಿನಿಯೊಂದರಲ್ಲಿ ಇತ್ತೀಚೆಗೆ, 'ಕೆಜಿಎಫ್' ಚಿತ್ರದ ಬಳಿಕ ಯಶ್ ಯಾವ ಸಿನಿಮಾದಲ್ಲಿ ನಟಿಸುತ್ತಾರೆ, 'ಕಾಂತಾರ' ನಾಯಕ ರಿಷಭ್ ಶೆಟ್ಟಿ ಯಾವ ಸಿನಿಮಾ ಮಾಡುತ್ತಾರೆ ಎಂಬ ಚರ್ಚೆಯನ್ನು ಬಿಟ್ಟೂ ಬಿಡದೆ ಮಾಡಲಾಗುತ್ತಿದೆ. ಇದನ್ನು ನೋಡಿ ನೋಡಿ ವಾಕರಿಕೆ ಬಂದಿದೆ. ಒಂದು ಯಶಸ್ವಿ ಸಿನಿಮಾದ ನಂತರ ನಟ–ನಿರ್ದೇಶಕರ ಮೇಲೆ ಅಭಿಮಾನಿಗಳಿಗೆ ನಿರೀಕ್ಷೆ ಹೆಚ್ಚಾಗುತ್ತದೆ. ಹಾಗೆಯೇ ಅವರ ಮೇಲೆ ಒತ್ತಡವೂ ಹೆಚ್ಚಾಗುತ್ತದೆ. ಆದರೆ ಟೀವಿ ವೀಕ್ಷಿಸುವ ಸಾಮಾನ್ಯ ನಾಗರಿಕನಿಗೆ ಇದು ಯಾವುದೂ ಮುಖ್ಯ ಅಲ್ಲ. ಅವನು ಅವನದೇ ಜಂಜಾಟದಲ್ಲಿ ಮುಳುಗಿರುತ್ತಾನೆ. ತನ್ನ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗೋಪಾಯಗಳ ಬಗ್ಗೆ ಯೋಚಿಸುತ್ತಾನೆ. ಅಂತಹುದಕ್ಕೆ ನೆರವು ಆಗಬಲ್ಲ ಚಿಂತನಾಪೂರ್ಣ ಕಾರ್ಯಕ್ರಮಗಳು ಇಂದಿನ ಅಗತ್ಯ.

—ಶಿವಕುಮಾರ ಕೊ. ಬಣಗಾರ

## ಹೊಸಬರಿಗೆ ಅವಕಾಶ ಕೊಡಿ

ಇತ್ತೀಚೆಗೆ ಯಾವುದೇ ಕಾರ್ಯಕ್ರಮವಿರಲಿ ಅಲ್ಲಿ ಅನುಶ್ರೀ ಅವರು ನಿರೂಪಕರು ಆಗಿದ್ದಲ್ಲಿ ನೋಡಲು ಹಿಂಜರಿಯುವಂತೆ ಆಗಿದೆ. 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ರಿಯಾಲಿಟಿ ಶೋನಲ್ಲಿ ದೊಡ್ಡ ದನಿಯಲ್ಲಿ ಅರ್ಜುನ್ ಜನ್ಯ ಅವರೊಡನೆಯ ಪ್ರೇಮಾಲಾಪ ಪ್ರಹಸನ, ಮಹಾ ಗುರುಗಳಿಗೆ ಮತ್ತೆ ಮತ್ತೆ ಹೊಗಳುವುದು, ಶಿವಣ್ಣನ ಎನರ್ಜಿ ವೈಭವೀಕರಿಸಿ ಅವರಿಂದ ಅನಗತ್ಯ ಡಾನ್ಸ್ ಮಾಡಿಸುವುದು, ಹೇಳಿದ್ದನ್ನೇ ಹೇಳುತ್ತಾ ಚಪ್ಪಾಳೆ ಹೊಡೆಸುವ ಅನುಶ್ರೀ ನಮಗೆ ಬೋರ್ ಹೊಡೆಸುತ್ತಿದ್ದಾರೆ. ಹೊಸ ಪ್ರತಿಭಾಶಾಲಿ ಮೊಗ್ಗುಗಳು ಅರಳುವ ಅವಕಾಶಕ್ಕಾಗಿ ಕಾಯುತ್ತಿವೆ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ